ಲೇರುತ್ತ ಅಮರನಾಥನ ಮುಂದೆ ನಿಂತಾಗ ಅಳುವೇ ಬರುವಂತಾಯಿತು. ೮-೧೦ ಅಡಿ ಎತ್ತರದ ಹಿಮರೂಪೀ ಅಮರನಾಥ ಅತ್ಯಂತ ಕಠಿಣ ಯಾತ್ರೆ ಮುಗಿಸಿ ಬಂದ ಯಾತ್ರಿಕರನ್ನೆಲ್ಲ ಮನದಣಿಯೆ ಹರಸುತ್ತಿದ್ದ. ಗುಹೆಯ ತಂಪು ಸನ್ನಿಧಿ, ಶೀತಲ ವಾತಾವರಣ ದೇಹವನ್ನಷ್ಟೇ ಅಲ್ಲ, ಹೃದಯ-ಮನಸ್ಸನ್ನೆಲ್ಲ ಧನ್ಯತೆಯಿಂದ ತೊಯ್ಯಿಸಿತು. ಭಾವಭರಿತನಾದ ನಾನು ಅಮರನಾಥನಿಗೆ ನಮಸ್ಕರಿಸಿ, ಅವನಿಗೆ ನನ್ನೆಲ್ಲ ಪ್ರಾರ್ಥನೆಗಳನ್ನು ಸಲ್ಲಿಸುವಷ್ಟರಲ್ಲಿ - ಮಿಲಿಟರಿಯವರು, 'ಬಾಬಾಜಿ, ಮುಂದೆ ಸರಿಯಿರಿ' ಎನ್ನತೊಡಗಿದರು. ಆ ಕ್ಷಣದಲ್ಲಿ ನಾನು ಪವಿತ್ರ ಪಾರಿವಾಳಗಳನ್ನು ನೋಡದೆ ಹೋದೆ. 'ಅವುಗಳು ಅಲ್ಲೇ ಇದ್ದವು; ಅಮರನಾಥ ಲಿಂಗದ ಮೇಲೆಯೇ ಕುಳಿತಿದ್ದವು' ಎಂದು ನಮ್ಮ ಗುಂಪಿನ ಇತರರು ಹೇಳಿದರು. ಅಂತೂ ಕೊನೆಗೆ ಅಮರನಾಥನ ದರ್ಶನಭಾಗ್ಯ ಒದಗಿತಲ್ಲ ಎಂಬ ಧನ್ಯತಾಭಾವ ಹೊಂದಿ, ಹೆಚ್ಚು ತಡಮಾಡದೆ ನಾವೆಲ್ಲ ಮರಳಿ ಬಾಲ್‌ತಾಲ್ ದಾರಿಯಿಂದ ಇಳಿಯತೊಡಗಿದೆವು.



ನಮ್ಮ ತಂಡ - ಅಮರನಾಥನ ಸನ್ನಿಧಿಯಲ್ಲಿ

ಬಾಲ್‌ತಾಲ್ ದಾರಿಯಲ್ಲಿ ಒಂದೇ ಸಮನೆ ಇಳಿಜಾರು, ನಡುನಡುವೆ ಹೋಗುವ-ಬರುವ ಯಾತ್ರಿಕರ, ಕುದುರೆಗಳ, 'ಪಲ್ಲಕ್ಕಿ'ಗಳ ತಿಕ್ಕಾಟದಲ್ಲಿ 'ಟ್ರಾಫಿಕ್ ಜಾಮ್' ಉಂಟಾಗುತ್ತಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಕೆಸರುಕೊಚ್ಚೆಯ ಮೇಲೆ ನಡೆಯುವುದೇ (ಅಥವಾ 'ಜಾರುವುದು' ಎನ್ನಬೇಕು) ದೊಡ್ಡ ಸವಾಲಾಗಿತ್ತು. ಬೆಳಿಗ್ಗೆ ಹತ್ತು ಗಂಟೆಯ ಹೊತ್ತಿಗೆ ಹೊರಟವರು ಮಧ್ಯಾಹ್ನ ಮೂರರ ಹೊತ್ತಿಗೆ ಬಾಲ್‌ತಾಲ್ ತಲುಪಿದೆವು. ಅಲ್ಲಿಂದ ಮತ್ತೆ ಕಾರಿನಲ್ಲಿ ಹೊರಟು, ಸಂಜೆ ಆರಕ್ಕೆ ಸುರಕ್ಷಿತವಾಗಿ ಶ್ರೀನಗರ ತಲುಪಿದೆವು.

ಅಮರನಾಥ ಯಾತ್ರೆಯ ಬಗ್ಗೆ ಸಾಕಷ್ಟು ಓದಿದ್ದೆ; ಆದರೆ ನೇರ ಅನುಭವ ತುಂಬ ವಿಭಿನ್ನವಾದದ್ದು, ವಿಶಿಷ್ಟವಾದದ್ದು. ಕಷ್ಟಪಟ್ಟರೂ ಅದರಲ್ಲಿ ಧನ್ಯತೆಯಿದೆ. ಹಿಮದ, ಕೊಚ್ಚೆ-ಕೆಸರಿನ ಮಾರ್ಗದಲ್ಲಿ ಕೋಲೂರಿ ಸಾಗಿದ್ದರಿಂದ, ನನ್ನ ಬಲಭುಜಕ್ಕೆ ಒತ್ತಡ ಹೆಚ್ಚಿ ಉಂಟಾದ ನೋವು, ಯಾತ್ರೆ ಮುಗಿಸಿ ಇಪ್ಪತ್ತೈದು ದಿನಗಳಾದರೂ ಸಂಪೂರ್ಣ ಮಾಯವಾಗಲಿಲ್ಲ. ಭುಜದಲ್ಲಿ ನೋವಾದಾಗಲೆಲ್ಲ ಅಮರನಾಥನ ದರ್ಶನದ ನೆನಪಾಗಿ, ಧನ್ಯತೆಯ ಭಾವ ಮೂಡುತ್ತದೆ. ಜೀವನವೇ ಹೀಗಲ್ಲವೆ? ಒಂದೊಂದು ನೋವಿನ, ದುಃಖದ ಹಿಂದೆ ಅದಾವುದೋ ನಲಿವಿದೆ; ಅಂತೆಯೇ ಪ್ರತಿಯೊಂದು ದಿವ್ಯ ಅನುಭವದ ಹಿಂದೆ ಅದೆಷ್ಟೋ ಹೆಜ್ಜೆಗಳ ಶ್ರಮವಿದೆ. ದೂರ, ಬಹುದೂರ ಸಾಕ್ಷಿಯಾಗಿ ನಿಂತು ಎಲ್ಲವನ್ನೂ ಗಮನಿಸುತ್ತಿರುವ ಅಮರನಾಥನಿಗೆ ಎಲ್ಲವೂ ಒಂದು ಲೀಲೆ; ನಮಗೆ ಮಾತ್ರ ಅವನ ಕೃಪಾಕಿರಣವೊಂದೇ ದಾರಿದೀಪ. ✤

## ಅಮರನಾಥದಲ್ಲಿ ಸ್ವಾಮಿ ವಿವೇಕಾನಂದರು

ಸ್ವಾಮಿ ವಿವೇಕಾನಂದರು ೧೮೯೮ರ ಆಗಸ್ಟ್ ೨ರಂದು ಅಮರನಾಥ ದರ್ಶನ ಮಾಡಿದರು. ಆ ಸಂದರ್ಭದಲ್ಲಿ ಅವರೊಂದಿಗಿದ್ದ ಸೋದರಿ ನಿವೇದಿತಾ ಬರೆಯುತ್ತಾಳೆ: ''ಯಾತ್ರಿಕರು ಏನು ಮಾಡಬೇಕೊ ಅದನ್ನೆಲ್ಲ ಸ್ವಾಮೀಜಿ ನೆರವೇರಿಸಿದರು. ಜಪ ಮಾಡಿದರು, ಉಪವಾಸವಿದ್ದರು, ಹತ್ತಿರ ಹರಿಯುತ್ತಿದ್ದ ಹಿಮನದಿಯಲ್ಲಿ ಸ್ನಾನ ಮಾಡಿದರು. ಗುಹೆಯನ್ನು ಪ್ರವೇಶ ಮಾಡಿದ ಮೇಲೆ ಅವರಿಗೆ ಶಿವನೇ ಕಂಡಂತೆ ಇತ್ತು. ಯಾತ್ರಿಕರ ಗುಜುಗುಜು ಗುಂಪು, ಮೇಲೆ ಹಾರಾಡುತ್ತಿದ್ದ ಪಾರಿವಾಳಗಳು, ಇವುಗಳ ನಡುವೆ ಸ್ವಾಮೀಜಿ ಶಿವನಿಗೆ ನಮಿಸಿದರು. ಅನಂತರ ಎಲ್ಲಿ ಭಾವಪರವಶನಾಗುವೆನೋ ಎಂದು ಅಂಜಿ ಎದ್ದು ಮೌನವಾಗಿ ಹೊರಟುಬಂದರು. ಆ ಅಲ್ಪ ಸಮಯದಲ್ಲಿ ಶಿವ ಇವರಿಗೆ ಇಚ್ಛಾಮರಣವನ್ನು ಅನುಗ್ರಹಿಸಿದ ಎಂದು ಹೇಳುತ್ತಿದ್ದರು.'' ಅಮರನಾಥ ದರ್ಶನದ ಬಳಿಕ ಸ್ವಾಮೀಜಿ ಹೇಳಿದರು:

''ಆ ಮೂರ್ತಿ ಸಾಕ್ಷಾತ್ ಭಗವಂತನೇ ಆಗಿತ್ತು. ಅಲ್ಲಿ ಕೇವಲ ಪೂಜೆಯ ವಾತಾವರಣವೇ ತುಂಬಿಹೋಗಿತ್ತು. ಅಷ್ಟೊಂದು ಸುಂದರವಾದದ್ದನ್ನು, ಅಷ್ಟೊಂದು ಸ್ಫೂರ್ತಿದಾಯಕವಾದದ್ದನ್ನು ನಾನು ಬೇರೆಲ್ಲೂ ಕಂಡಿಲ್ಲ.''

''ಅಮರನಾಥ ಗುಹೆಯನ್ನು ಮೊದಲು ಹೇಗೆ ಕಂಡುಹಿಡಿದರು ಎಂಬುದನ್ನು ನಾನು ಚೆನ್ನಾಗಿ ಕಲ್ಪಿಸಿಕೊಳ್ಳಬಲ್ಲೆ. ಬೇಸಿಗೆಯಲ್ಲಿ ಒಂದು ಸಲ ಕುರಿಗಳು ಮಂದೆಯಿಂದ ತಪ್ಪಿಸಿಕೊಂಡಿರಬಹುದು. ಕುರುಬರು ಅದನ್ನು ಹುಡುಕಿಕೊಂಡು ಇಲ್ಲಿಗೆ ಬಂದಿರಬಹುದು. ಅನಿರೀಕ್ಷಿತವಾಗಿ ಎದುರಾದ ಕರ್ಪೂರದಂತೆ ಬಿಳಿಬಣ್ಣದ, ಹಲವು ಶತಮಾನಗಳಿಂದ ಮಾನವನ ಕಣ್ಣಿಗೆ ಬೀಳದೆ, ಗುಹೆಯ ಮೇಲ್ಭಾಗದಿಂದ ಅಭಿಷೇಕದಂತೆ ನೀರ ಹನಿ ಸುರಿಯುತ್ತಿರುವ, ಗಟ್ಟಿಯಾದ ಹಿಮಲಿಂಗವನ್ನು ಕಂಡಾಗ ಅವರಿಗೆ ಯಾವ ಭಾವನೆ ಮೂಡಿರಬಹುದು! ಅನಂತರ ಅವರು ಮನೆಗೆ ಹಿಂದಿರುಗಿ, ಸಾಕ್ಷಾತ್ ಮಹಾದೇವನೇ ತಮಗೆ ಕಾಣಿಸಿಕೊಂಡನೆಂದು ಕಣಿವೆಯ ಇತರ ಕುರುಬರಿಗೆ ಹೇಳಿರಬಹುದು.''




ಸ್ವಾಮಿ ನಿತ್ಯಸ್ಥಾನಂದ

# ವಿಶ್ವಾಶ್ವತ್ಥ

**ಈ** ಸಂಸಾರವನ್ನು ಅನೇಕ ವಿಷಯಗಳಿಗೆ ಹೋಲಿಸಿ ವಿವರಿಸುವುದು ವಾಡಿಕೆ. ಸಂಸಾರವನ್ನು ತಿಮಿಂಗಿಲ ಮೊಸಳೆಗಳಿಂದ ಕೂಡಿದ ಸಾಗರ ಅಥವಾ ನದಿಗೆ ಹೋಲಿಸುವುದು ಸಾಮಾನ್ಯ. ಸಂಸಾರ ಸಾಗರ, ಭವಸಾಗರ, ಭವನದಿ ಇತ್ಯಾದಿ ಶಬ್ದಗಳು ಸುಪರಿಚಿತ. ಅನೇಕ ಹಿಂಸ್ರಪಶುಗಳಿಂದ ಕೂಡಿದ ಘೋರ ಅರಣ್ಯಕ್ಕೆ ಸಂಸಾರವನ್ನು ಹೋಲಿಸುವುದೂ ಉಂಟು. ಸಂಸಾರವನ್ನು ಬಲೆಗೂ (ಸಂಸಾರ ಜಾಲ) ಹೋಲಿಸಲಾಗಿದೆ. ಸಂಸಾರವು ಒಂದು ಸುಳಿಯೂ ಹೌದು. ಸಂಸಾರಪಂಕ ಎಂಬ ಉಕ್ತಿಯೂ ಪ್ರಚಲಿತ. ಈ ಸಂಸಾರವನ್ನು ಒಂದು ನರಕ ಎಂದು ಕರೆಯುವವರೂ ಇದ್ದಾರೆ. ಹೀಗೆ ಅನೇಕ ಹೋಲಿಕೆಗಳಿವೆ. ಆದರೆ ಇವೆಲ್ಲವುಗಳಿಗಿಂತ ಸಂಸಾರ ವೃಕ್ಷ ಎನ್ನುವುದು ಹೆಚ್ಚು ಸೂಕ್ತವಾಗಿದೆ. ಏಕೆಂದರೆ ವೃಕ್ಷಕ್ಕೂ ಸಂಸಾರಕ್ಕೂ ಅನೇಕ ಸಾದೃಶ್ಯಗಳನ್ನು ಗುರುತಿಸಬಹುದು. ಶ್ರೀಕೃಷ್ಣನು ಇಲ್ಲಿ ಸಂಸಾರವನ್ನು ಅಶ್ವತ್ಥಕ್ಕೆ ಹೋಲಿಸಿ ವಿವರಿಸುತ್ತಾನೆ.

ಅಶ್ವತ್ಥವೆಂದರೆ **ನ ಶ್ವಃ ಅಪಿ ಸ್ಥಾತಾ ಇತಿ ಅಶ್ವತ್ಥ** – ''ನಾಳೆಯವರೆಗೂ ಇಲ್ಲದೆ ಇರುವುದು ಯಾವುದೋ ಅದು ಅಶ್ವತ್ಥ.'' ಅಂದರೆ ಅಶಾಶ್ವತವಾದುದು ಎಂದರ್ಥ. ಆದರೆ ಅಧ್ಯಾಯದ ಪ್ರಾರಂಭದ ಶ್ಲೋಕದಲ್ಲಿ 'ಈ ವೃಕ್ಷವು ಅವ್ಯಯವಾದುದು' ಎಂದು ಹೇಳಲಾಗಿದೆ. ಇಲ್ಲಿ ಅವ್ಯಯವೆಂದರೆ ಕ್ಷೀಣಿಸದೆ ಇರುವಂತಹುದು. ಕಠೋಪನಿಷತ್ತಿನಲ್ಲಿ ಬರುವ ಇದೇ ರೂಪಕದಲ್ಲಿ ಈ ಅಶ್ವತ್ಥವು ಸನಾತನವಾದುದು ಎಂದು ಹೇಳಲಾಗಿದೆ. ಸಂಸಾರವು ಯಾವಾಗಲೂ ಇರುತ್ತದೆ, ಮತ್ತು ಕ್ಷೀಣಿಸುವುದೂ ಇಲ್ಲ, ಆದರೆ ನಿರಂತರವಾಗಿ ಬದಲಾಗುತ್ತಿರುತ್ತದೆ – ಜಗತ್ತಿನ ಸ್ವಭಾವವೇ ಬದಲಾವಣೆ. ಆದರೆ ಯಾರಿಗೆ ಈ ಸಂಸಾರದ ಬಗ್ಗೆ ವಿರಕ್ತಿಯುಂಟಾಗುತ್ತದೆಯೋ ಅವರ ಪಾಲಿಗೆ ಇದು ಕ್ಷೀಣಿಸುತ್ತಾ ಹೋಗುತ್ತದೆ. ವ್ಯಕ್ತಿಯು ಇದರಿಂದ ಪಾರಾಗಬಹುದೇ ಹೊರತು ಇದು ಮಾತ್ರ ನಾಶವಾಗುವುದಿಲ್ಲ. ಅದು ಇದ್ದರೆ ತಾನೆ ನಾಶವಾಗುವುದು! ಇಲ್ಲದ ವಸ್ತುವನ್ನು ನಾಶಮಾಡುವುದು ಹೇಗೆ? ಇರುವ ವಸ್ತುವನ್ನು ನಾಶಮಾಡಲಾಗುವುದಿಲ್ಲ ಹಾಗೂ ಇಲ್ಲದ ವಸ್ತುವಿಗೆ ನಾಶವಿಲ್ಲ. ಇಲ್ಲದ ವಸ್ತುವು ಇದೆ ಎಂಬ ಭ್ರಮೆಯನ್ನು ನಾವು ನಾಶಮಾಡಬೇಕಾಗಿದೆ. ನಾವು ಹಗ್ಗದಲ್ಲಿ ಹಾವನ್ನು ನೋಡುತ್ತೇವೆ. ಆ ಹಾವು ಸತ್ಯವಲ್ಲ, ಅದೊಂದು ಭ್ರಮೆ. ಆದರೆ ಆ ಹಾವನ್ನು ಕೋಲಿನಿಂದ ಸಾಯಿಸಲಾಗುತ್ತದೆಯೆ? ಅದನ್ನು ಯಾವುದೇ ಕ್ರಿಯೆಯಿಂದಲೂ ನಾಶಮಾಡಲಾಗುವುದಿಲ್ಲ. ಹಗ್ಗದ ಜ್ಞಾನದೊಂದಿಗೆ ಹಾವಿನ ಭ್ರಮೆ ನಾಶವಾಗುತ್ತದೆ, ಅಷ್ಟೆ.

ಈ ಸಂಸಾರವೃಕ್ಷವು ಭ್ರಮೆ ಎಂಬುದನ್ನು ಶ್ರೀಕೃಷ್ಣನು ಇದೇ ಅಧ್ಯಾಯದ ಮೂರನೆಯ ಶ್ಲೋಕದಲ್ಲಿ ವ್ಯಕ್ತಪಡಿಸಿದ್ದಾನೆ:

**ನ ರೂಪಮಸ್ಯೇಹ**
**ತಥೋಪಲಭ್ಯತೇ ।**
**ನಾಂತೋ ನ ಚಾದಿ-**
**ರ್ನ ಚ ಸಂಪ್ರತಿಷ್ಠಾ ॥**

'ಈ ಸಂಸಾರದ ಸ್ವರೂಪವು ನಮ್ಮ ಅರಿವಿಗೆ ಬರುವುದಿಲ್ಲ. ಇದರ ಆದಿಯಾಗಲಿ ಮಧ್ಯವಾಗಲಿ ಅಂತವಾಗಲಿ ಕಾಣುವುದಿಲ್ಲ.' ದೃಶ್ಯಜಗತ್ತಿನ ವಾಸ್ತವತೆಯನ್ನು ಅರಸುತ್ತ ಹೋದರೆ ಅದರ ಅವಸ್ತುತ್ವವು ನಮ್ಮ ಅರಿವಿಗೆ ಬರುತ್ತದೆ. ಈ ಅನ್ವೇಷಣೆಯು ನಮ್ಮನ್ನು ಭೌತಿಕದಿಂದ ಅಭೌತಿಕಕ್ಕೆ ಒಯ್ಯುತ್ತದೆ. ಸ್ವಾಮಿ ವಿವೇಕಾನಂದರ ಭಾಷೆಯಲ್ಲಿ ಭೌತಿಕವು ಅಭೌತಿಕದಲ್ಲಿ ಕರಗುತ್ತದೆ. ಅಂದರೆ ವಾಸ್ತವಿಕವಾಗಿ ಏನೂ ಅರಿಯುವುದಕ್ಕೆ ಉಳಿಯದಿದ್ದಾಗ ನಮ್ಮ ಗಮನವು ಅರಿಯುವವನ ಕಡೆ ತಿರುಗುತ್ತದೆ. ಬೋಧ್ಯವಸ್ತುಗಳೆಲ್ಲ ಕರಗಿಹೋಗಿ ಬೋಧಸ್ವರೂಪನಾದ ಆತ್ಮನೊಬ್ಬನು ಮಾತ್ರ ಉಳಿಯುತ್ತಾನೆ, ಏಕೆಂದರೆ ಅರಿಯುವವನನ್ನು ಅಳಿಸಲಾಗುವುದಿಲ್ಲ. ಅರಿಯುವವನನ್ನೇ ಅಲ್ಲಗಳೆದರೆ, ಅಲ್ಲಗಳೆಯುವವನೇ ಅರಿಯುವವನಾಗುತ್ತಾನೆ. ವಿದ್ಯಾರಣ್ಯರು ತಮ್ಮ ***ಪಂಚದಶಿ*** ಯಲ್ಲಿ ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ: ಒಬ್ಬನು ತನಗೆ ನಾಲಿಗೆಯೇ ಇಲ್ಲ ಎಂದು ಹೇಳಿದನಂತೆ. 'ನಾಲಿಗೆಯೇ ಇಲ್ಲ' ಎಂಬ ಮಾತೇ ಅವನಿಗೆ ನಾಲಿಗೆ ಇರುವುದನ್ನು ಸೂಚಿಸುತ್ತದೆ. ಹಾಗೆಯೇ ತಾನಿಲ್ಲ ಎಂಬ ಮಾತೇ ತಾನಿರುವುದನ್ನು ಸೂಚಿಸುತ್ತದೆ. ಮತ್ತೆ ತಾನಿಲ್ಲದಿರುವುದು ಯಾರಿಗೂ ರುಚಿಸದು. ಹಾಗಾದರೆ ತಾನಿಲ್ಲವಾಗುವುದೇ ಆತ್ಯಂತಿಕ ಗುರಿಯಲ್ಲವೇ ಎಂದು ಕೇಳಬಹುದು. ನಿಜ, ದೇಹೇಂದ್ರಿಯ ಮನಸ್ಸುಗಳಿಂದ ಪ್ರತ್ಯೇಕವಾದ ತಾನೆಂಬ ಅರಿವಿನಲ್ಲಿ ತನ್ನತನವಿರುವುದಿಲ್ಲ, ಅದರಲ್ಲಿ ವೈಯಕ್ತಿಕತೆ ಇರುವುದಿಲ್ಲ – ಅದು ಸಮಷ್ಟಿ ಚೈತನ್ಯದೊಡನೆ ಒಂದಾಗಿ ಬಿಡುತ್ತದೆ – ಉಪ್ಪಿನ ಗೊಂಬೆಯು ಸಮುದ್ರದಲ್ಲಿ ಕರಗುವಂತೆ. ಆ ಸ್ಥಿತಿಯನ್ನೇ ಶ್ರೀಕೃಷ್ಣನು ನಾಲ್ಕನೆಯ ಶ್ಲೋಕದಲ್ಲಿ **ಯಸ್ಮಿನ್ ಗತಾ ನ ನಿವರ್ತಂತಿ ಭೂಯಃ** – 'ಯಾವುದನ್ನು ತಲುಪಿದವರು ಹಿಂತಿರುಗುವುದಿಲ್ಲವೋ' ಎಂಬ ಮಾತಿನಲ್ಲಿ ಹೇಳಿರುತ್ತಾನೆ.

ಈಗ ಸದ್ಯಕ್ಕೆ ಸಂಸಾರವೃಕ್ಷಕ್ಕೆ ಹಿಂದಿರುಗೋಣ! ನಮಗೆ ತಿಳಿದಿರುವಂತೆ ಎಲ್ಲ ವೃಕ್ಷಗಳೂ ಕೆಳಗಿನಿಂದ ಮೇಲೆ ಬೆಳೆಯುತ್ತವೆ. ಆದರೆ ಈ ಸಂಸಾರವೃಕ್ಷವು ಮೇಲಿನಿಂದ ಕೆಳಕ್ಕೆ ಬೆಳೆಯುತ್ತದಂತೆ! ಸಂಸಾರವೇ ತಲೆಕೆಳಗು ತಾನೆ! ಇದರ ಮೂಲವೂ ಮೇಲಿದೆಯಂತೆ **(ಊರ್ಧ್ವಮೂಲಂ)**, ಅಂದರೆ ಇದರ ಮೂಲ ಭಗವಂತನಲ್ಲಿದೆ ಎಂದರ್ಥ. ಭಗವಂತನು ಪರಮಶ್ರೇಷ್ಠ ಸತ್ಯವಾಗಿರುವುದರಿಂದ

ಅವನು ಮೇಲಿರುವನೆಂದು ಭಾವಿಸುತ್ತೇವೆ. ನಿಜವಾಗಿಯೂ ಭಗವಂತನ ವಿಷಯದಲ್ಲಿ ಮೇಲೆ ಕೆಳಗೆ ಎಂಬುದಿಲ್ಲ – ಅವನು ಸರ್ವವ್ಯಾಪಿ. ನಾವು ಆಧ್ಯಾತ್ಮಿಕ ಜೀವನದಲ್ಲಿ ಮುಂದುವರಿಯುವುದೆಂದರೆ ಉನ್ನತೋನ್ನತವಾಗಿ ಮೇಲೇರಿ ಭಗವಂತನನ್ನು ಪಡೆಯುವುದು, ಜಗತ್ತಿನ ಮೂಲಕ್ಕೆ ಹೋಗುವುದು. ಈ ದೃಷ್ಟಿಯಿಂದಲೂ ಇದು '**ಊರ್ಧ್ವಮೂಲಂ**' ಎಂದು ಹೇಳಿರುವುದು ಔಚಿತ್ಯಪೂರ್ಣವಾಗಿದೆ. ಈ ಸಂಸಾರದ ಮೂಲ ಮೇಲೆಲ್ಲೋ ನಮ್ಮ ದೃಷ್ಟಿಗೆ ನಿಲುಕದ, ನಮ್ಮ ಕಲ್ಪನೆಗೆ ಎಟುಕದ ರಹಸ್ಯಾತ್ಮಕ ನೆಲೆಯಲ್ಲಿದೆ. ಈ ದೃಷ್ಟಿಯಿಂದಲೂ ಇದು 'ಊರ್ಧ್ವಮೂಲ' ಎಂದು ಹೇಳಬಹುದು. ಸಂಸಾರಮೂಲದ ರಹಸ್ಯವನ್ನು ಬಯಲು ಮಾಡಲು ಅನಾದಿ ಕಾಲದಿಂದಲೂ ತತ್ತ್ವಜ್ಞಾನಿಗಳು ಪ್ರಯತ್ನಿಸುತ್ತಲೇ ಇದ್ದಾರೆ. ಮತ್ತು ಈ ಪ್ರಯತ್ನದ ಫಲವಾಗಿ ಅನೇಕ ಸಿದ್ಧಾಂತಗಳು ಹುಟ್ಟಿಕೊಂಡಿವೆ. ಈ ರಹಸ್ಯವನ್ನು ಬಿಡಿಸಲಾಗುವುದಿಲ್ಲ ಎಂದು ಅದ್ವೈತಿಗಳು ಜಗತ್ತೇ ಮಿಥ್ಯ ಎಂದು ಸಾರಿಬಿಟ್ಟರು! ಬೌದ್ಧರು ಜಗತ್ತಿಗೆ ಮೂಲವೇ ಇಲ್ಲ ಎಂದು ಕೈತೊಳೆದುಕೊಂಡುಬಿಟ್ಟರು! ಶ್ರೀವಿದ್ಯಾರಣ್ಯರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ:

**ನ ಜಾನಾಮಿ ಕಿಮಪ್ಯೇತದಿತ್ಯಂತೇ ಶರಣಂ ತವ ।**
**ಅತ ಏವ ಮಹಾಂತೋಽಸ್ಯ ಪ್ರವದಂತೀಂದ್ರಜಾಲತಾಮ್ ॥**

*(ಪಂಚದಶಿ, ಚಿತ್ರದೀಪ, ೧೪೬)*

'ಕೊನೆಗೆ 'ನಾನು ಇದನ್ನು ಸ್ವಲ್ಪವೂ ಅರಿಯೆನು, ನಿನಗೆ ಶರಣು' ಎಂದು ಹೇಳಬೇಕಾಗುತ್ತದೆ. ಆದ್ದರಿಂದಲೇ ದೊಡ್ಡ ಮುನಿಗಳು ಈ ಜಗತ್ತು ಇಂದ್ರಜಾಲವೆಂದು ಹೇಳುತ್ತಾರೆ.'

ಈ ಸಂಸಾರ ವೃಕ್ಷವು ಕೆಳಮುಖವಾಗಿ ಜಗತ್ತಿನ ರೂಪದಲ್ಲಿ ಶಾಖೋಪಶಾಖೆಯಾಗಿ ಹರಡಿಕೊಂಡಿದೆ (**ಅಧಃಶಾಖಂ**). ಈ ಸಂಸಾರವೃಕ್ಷದಲ್ಲಿ ಮೇಲೇರುತ್ತ ಹೋಗುವುದೆಂದರೆ ಅಧೋಗತಿಯನ್ನು ಹೊಂದುವುದು. ವೃಕ್ಷದ ಹೂವುಹಣ್ಣುಗಳು ಅದರ ತುದಿಭಾಗದಲ್ಲಿರುತ್ತವೆ, ಮತ್ತು ಇವು ಇಂದ್ರಿಯವಿಷಯಗಳನ್ನು ಪ್ರತಿನಿಧಿಸುತ್ತವೆ.

ಇವುಗಳನ್ನು ನಾವು ಅರಸುತ್ತ ಹೋದರೆ ನಾವು ಅಧೋಗತಿಯನ್ನು ಹೊಂದುತ್ತೇವೆ. ಹೀಗೆ ಫಲಪುಷ್ಪಗಳನ್ನು ಅರಸುತ್ತ ಹೋಗಿ ಕೊಂಬೆ ಮುರಿದು ಕೆಳಗೆ ಬೀಳುತ್ತೇವೆ. ಮತ್ತೆ ಮೇಲೇರುತ್ತೇವೆ, ಮತ್ತೆ ಬೀಳುತ್ತೇವೆ. ಹೀಗೆ ಬಿದ್ದು ಎದ್ದು ಕೊನೆಗೊಮ್ಮೆ ಸಂಸಾರವನ್ನೇ ಒದ್ದುಬಿಡುತ್ತೇವೆ – ಇದರ ಸಹವಾಸವೇ ಬೇಡವೆಂದು. ಇದೇ ವೈರಾಗ್ಯ. ಈ ವೈರಾಗ್ಯ ಆಯುಧದಿಂದ (**ಅಸಂಗಶಸ್ತ್ರ**) ಸಂಸಾರವೃಕ್ಷವನ್ನು ಕತ್ತರಿಸಬೇಕೆಂದು ಶ್ರೀಕೃಷ್ಣನು ಹೇಳುತ್ತಾನೆ.

ಈ ವೃಕ್ಷದ ಎಲೆಗಳೇ ವೇದಗಳು. ಎಲೆಗಳು ವೃಕ್ಷಕ್ಕೆ ಆಹಾರವನ್ನು ನೀಡುವಂತೆ ವೇದಗಳು ಈ ಸಂಸಾರವೃಕ್ಷಕ್ಕೆ ಆಧಾರ – ಧರ್ಮಾಧರ್ಮ ಕರ್ಮಫಲಗಳು ವೇದಗಳಲ್ಲಿ ಉಕ್ತವಾಗಿರುವುದರಿಂದ – ಎಂದು ಶ್ರೀಶಂಕರಾಚಾರ್ಯರು ಈ ಹೇಳಿಕೆಗೆ ವಿವರಣೆಯನ್ನು ನೀಡಿದ್ದಾರೆ. ಧರ್ಮಾಧರ್ಮ ಆಚರಣೆಗಳು ಸುಖದುಃಖಾದಿ ಅನೇಕ ಫಲಗಳನ್ನು ನೀಡುತ್ತವೆ ಮತ್ತು ಇವುಗಳೇ ಸಂಸಾರವೃದ್ಧಿಗೆ ಕಾರಣವಾಗಿರುತ್ತವೆ. ಧರ್ಮಾಧರ್ಮ ಆಚರಣೆಗಳಿಂದ ಮನಸ್ಸಿನಲ್ಲಿ ಸಂಸ್ಕಾರಗಳು ಉಂಟಾಗುತ್ತವೆ. ಈ ಸಂಸ್ಕಾರಗಳು ತಮಗನುಗುಣವಾದ ಫಲ ನೀಡುತ್ತವೆ, ಈ ಫಲಗಳನ್ನು ಅನುಭವಿಸಲು ಕರ್ಮ ಮತ್ತು ಈ ಕರ್ಮಗಳಿಂದ ಸಂಸ್ಕಾರ. ಹೀಗೆ ಸಂಸಾರ ಚಕ್ರ ಮುಂದುವರಿಯುತ್ತದೆ. ಸಂಸಾರವೆಂದರೆ ಚೆನ್ನಾಗಿ ಚಲಿಸುವುದು (**ಸಮ್ಯಕ್ ಸರತೀತಿ**). ಈ ಸಂಸಾರ ಚಲನೆಗೆ ಸಂಸ್ಕಾರಗಳ ಶಕ್ತಿ ಬೇಕು. ಸಂಸಾರಕ್ಕೆ 'ಕ' ಅನ್ನು ಅಂದರೆ ಕರ್ಮವನ್ನು ಸೇರಿಸಿದರೆ ಸಂಸ್ಕಾರವಾಗುತ್ತದೆ. ಅಂದರೆ ಸಂಸಾರಕ್ಕೂ ಕರ್ಮಕ್ಕೂ ಬಹಳ ನಿಕಟ ಸಂಬಂಧವಿದೆ. ಇನ್ನೊಂದು ಅರ್ಥದಲ್ಲಿ ಸಂಸಾರ ವೆಂದರೆ ಸಮ್ಯಕ್ ಸಾರ – ಸರಿಯಾದ ಸಾರ. ನಿಸ್ಸಾರವಾದ ಈ ಸಂಸಾರದಲ್ಲಿ ಅದರ ಹಿಂದಿರುವ ನಿಜವಾದ ಸಾರವಸ್ತುವೇ ಭಗವಂತ. ನಿಸ್ಸಾರವಾದ ಸಂಸಾರವನ್ನು ಸಾರವತ್ತನ್ನಾಗಿ ಮಾಡುವುದೇ ಆಧ್ಯಾತ್ಮಿಕ ಕಲೆ.

ಎರಡನೆಯ ಶ್ಲೋಕದಲ್ಲಿ ಶ್ರೀಕೃಷ್ಣನು ಈ ಸಂಸಾರ ವೃಕ್ಷದ ಶಾಖೆಗಳು ಮೇಲೆ ಕೆಳಗೆ ಎಲ್ಲೆಲ್ಲಿಯೂ ಹರಡಿಕೊಂಡಿವೆ – ಆಲದ ಮರದ ಕೊಂಬೆಗಳಂತೆ ಎಂದು ಹೇಳುತ್ತಾನೆ. ಈ ಹೇಳಿಕೆ ಸಂಸಾರವು ಎಷ್ಟು ಜಟಿಲವಾದುದು ಎಂಬುದನ್ನು ಸೂಚಿಸುತ್ತದೆ. ಪ್ರಕೃತಿಯ ಮೂರು ಗುಣಗಳಿಂದ ಈ ವೃಕ್ಷದ ಕೊಂಬೆಗಳು ಬೆಳೆಯುತ್ತದೆ (**ಗುಣಪ್ರವೃದ್ಧಾಃ**). ವೃಕ್ಷವು ಬೆಳೆಯುವುದಕ್ಕೆ ಬೆಳಕು, ನೀರು ಮತ್ತು ಗೊಬ್ಬರ ಈ ಮೂರು ಆವಶ್ಯಕ. ಸತ್ತ್ವಗುಣವು ಬೆಳಕನ್ನೂ, ರಜೋಗುಣವು ನೀರನ್ನೂ ತಮೋಗುಣವು ಗೊಬ್ಬರವನ್ನು ಪ್ರತಿನಿಧಿಸುತ್ತವೆ. ಇಂದ್ರಿಯ ವಿಷಯಗಳು ಈ ವೃಕ್ಷದ ಚಿಗುರುಗಳಂತೆ (**ವಿಷಯ ಪ್ರವಾಲಾಃ**). ವೃಕ್ಷದ ಚಿಗುರುಗಳು ತುಂಬ ಸುಂದರವಾಗಿ ಕಾಣುವಂತೆ ಇಂದ್ರಿಯವಿಷಯಗಳೂ ತುಂಬ ಆಕರ್ಷಕವಾಗಿರುತ್ತವೆ. ಈ ಚಿಗುರುಗಳಿಂದಲೇ ವೃಕ್ಷಗಳು ಬೆಳೆಯುತ್ತ ಹೋಗುವಂತೆ, ವಿಷಯ ಸುಖದಿಂದಲೇ ಸಂಸಾರವು ಬೆಳೆಯುತ್ತ ಹೋಗುವುದು. ಚಿಗುರನ್ನು ನಾವು ಕತ್ತರಿಸುತ್ತ ಹೋಗಬೇಕು, ಆಗ ವೃಕ್ಷವು ಕ್ರಮೇಣ ಬಾಡುತ್ತದೆ. ಇದರಂತೆಯೇ ನಾವು ವಿಷಯಸುಖವನ್ನು ಮೊಟಕುಗೊಳಿಸುತ್ತ ಹೋದರೆ ಸಂಸಾರ ವೃಕ್ಷವು ಕ್ರಮೇಣ ಕ್ಷೀಣಿಸುತ್ತ ಬರುತ್ತದೆ.

ಇದರ ಬೇರುಗಳು ಕೆಳಗೆ ಮನುಷ್ಯಲೋಕದಲ್ಲಿ ಹರಡಿಕೊಂಡಿವೆಯಂತೆ. ನಾವು ಮಾಡುವ ಧರ್ಮಾಧರ್ಮಾದಿ ಕರ್ಮಗಳೇ ಈ ಬೇರುಗಳು, ಈ ಕರ್ಮಸಂಸ್ಕಾರಗಳೇ ಸಂಸಾರವೃಕ್ಷಕ್ಕೆ ಆಧಾರ, ಮತ್ತು ಮನುಷ್ಯಲೋಕವೇ ನಮ್ಮ ಕರ್ಮಕ್ಷೇತ್ರ. ಇಲ್ಲಿ ನಾವು ಮಾಡಿದ ಕರ್ಮಗಳಿಗೆ ಅನುಗುಣವಾಗಿ ಉನ್ನತ ಅಥವಾ ಅಧಮ ಲೋಕಗಳನ್ನು ಪಡೆಯುತ್ತೇವೆ. ಮತ್ತೆ ನಮ್ಮ ಕರ್ಮವನ್ನೆಲ್ಲ ಸವೆಸಿ ಆತ್ಯಂತಿಕ ಮುಕ್ತಿಯನ್ನು ಪಡೆಯುವುದೂ ಈ ಲೋಕದಲ್ಲಿಯೇ.

ಆದ್ದರಿಂದ ನಾವು ಇಲ್ಲಿಯೇ ಮುಕ್ತಿಯನ್ನು ಪಡೆಯಬೇಕೆಂದು ಶ್ರುತಿ ಮತ್ತು ಸ್ಮೃತಿ ಮತ್ತೆ ಮತ್ತೆ ಒತ್ತಿಹೇಳುತ್ತವೆ. ಅನಾಸಕ್ತ ಕರ್ಮದಿಂದ ಕರ್ಮಬಂಧನವು ಕಳಚುತ್ತದೆ – ಹೊಸ ಸಂಸ್ಕಾರಗಳು ಉಂಟಾಗದೆ ಇರುವುದರಿಂದ. ಆದ್ದರಿಂದಲೇ ಶ್ರೀಕೃಷ್ಣನು ಅಸಂಗ ಶಸ್ತ್ರದಿಂದ ಈ ವೃಕ್ಷವನ್ನು ಕತ್ತರಿಸಬೇಕೆಂದು ಹೇಳಿರುವುದು. ಆದರೆ ಈ ಆಯುಧವು ಹರಿತವಾಗಿರಬೇಕು, ಅಂದರೆ ವೈರಾಗ್ಯವು ತೀವ್ರವಾಗಿರಬೇಕು. ಅದನ್ನು ವಿವೇಕದ ಕಲ್ಲಿನ ಮೇಲೆ ಉಜ್ಜಿ ಇನ್ನೂ ಹರಿತಗೊಳಿಸಬೇಕು. ದೃಢವಾಗಿ ಅದನ್ನು ಕತ್ತರಿಸಬೇಕು, ಅಂದರೆ ದೃಢವಾದ ಶ್ರದ್ಧೆ ಇರಬೇಕು.

ಸಂಸಾರವನ್ನು ವೃಕ್ಷಕ್ಕೆ ಹೋಲಿಸುವುದು ಬಹಳ ರೂಢಿಯಲ್ಲಿದೆ. ಶ್ರೀಶಂಕರಾಚಾರ್ಯರು ***ವಿವೇಕಚೂಡಾಮಣಿ*** ಯಲ್ಲಿ ಒಂದು ರೀತಿಯ ಸಂಸಾರವೃಕ್ಷದ ವಿವರಣೆಯನ್ನು ನೀಡುತ್ತಾರೆ:

**ಬೀಜಂ ಸಂಸೃತಿ-ಭೂಮಿಜಸ್ಯ ತು ತಮೋದೇಹಾತ್ಮಧೀರಂಕುರೋ**
**ರಾಗಃ ಪಲ್ಲವಮಂಬು ಕರ್ಮ ತು ವಪುಃ ಸ್ಕಂಧೋಽಸವಃ ಶಾಖಿಕಾಃ।**
**ಅಗ್ರಾಣೀಂದ್ರಿಯಸಂಹತಿಶ್ಚ ವಿಷಯಾಃ ಪುಷ್ಪಾಣಿ ದುಃಖಂ ಫಲಂ**
**ನಾನಾಕರ್ಮಸಮುದ್ಭವಂ ಬಹುವಿಧಂ ಭೋಕ್ತಾಽತ್ರ ಜೀವಃ ಖಗಃ ॥**

'ಸಂಸಾರವೆಂಬ ವೃಕ್ಷಕ್ಕೆ ಅಜ್ಞಾನವೇ ಬೀಜವು. ದೇಹಾತ್ಮಬುದ್ಧಿಯೇ ಮೊಳಕೆಯು. ವಿಷಯಾಸಕ್ತಿಯೇ ಚಿಗುರು. ಕರ್ಮವೇ ನೀರು. ಶರೀರವೇ ಮಧ್ಯಭಾಗವು. ಪ್ರಾಣಗಳೇ ಕೊಂಬೆಗಳು. ಇಂದ್ರಿಯಸಮೂಹವೇ ಕೊಂಬೆಯ ತುದಿಗಳು. ಇಂದ್ರಿಯ ವಿಷಯಗಳೇ ಪುಷ್ಪಗಳು. ಬಗೆಬಗೆಯ ಕರ್ಮದಿಂದ ಉತ್ಪನ್ನವಾದ ಬಹುವಿಧವಾದ ದುಃಖವೇ ಫಲವು. ಇಲ್ಲಿಫಲವನ್ನು ಅನುಭವಿಸುವ ಜೀವವೇ ಪಕ್ಷಿಯು.'

ಬೀಜದಲ್ಲಿ ಇಡೀ ವೃಕ್ಷವೇ ಸುಪ್ತಾವಸ್ಥೆಯಲ್ಲಿ ಅಡಗಿರುವಂತೆ, ಮತ್ತೆ ಅದೇ ವೃಕ್ಷರೂಪದಲ್ಲಿ ಹೊರಬರುವಂತೆ, ಅವಿದ್ಯೆಯೇ ಈ ಸಂಸಾರಕ್ಕೆ ಮೂಲ, ಇದರಿಂದಲೇ ಇಡೀ ಜಗದ್ವಿಕ್ಷೇಪ ಪ್ರಾರಂಭವಾಗುತ್ತದೆ. ಈ ಅವಿದ್ಯೆಯ ದೆಸೆಯಿಂದ ಆತ್ಮನು ತನ್ನ ಸ್ವರೂಪವನ್ನು ಮರೆತು ದೇಹೇಂದ್ರಿಯ ಮನಸ್ಸುಗಳೊಡನೆ ಒಂದಾಗುತ್ತಾನೆ. ಈ ಒಂದಾಗುವಿಕೆಯೇ ಮೊಳಕೆ. ಈ ದೇಹಾತ್ಮಬುದ್ಧಿಯಿಂದ ವಿಷಯಾಸಕ್ತಿಯು ಚಿಗುರೊಡೆಯುತ್ತದೆ. ಆಗ ವಿಷಯಸುಖವನ್ನು ಅನುಭವಿಸಲು ಕರ್ಮ ಮಾಡುತ್ತೇವೆ. ನೀರು ಮರಕ್ಕೆ ಪುಷ್ಟಿಯನ್ನು ನೀಡುವಂತೆ, ಕರ್ಮವು ವಿಷಯಾಸಕ್ತಿಯ ಚಿಗುರನ್ನು ಅಧಿಕಗೊಳಿಸಿ ಸಂಸಾರವೃಕ್ಷವು ಹುಲಸಾಗಿ ಬೆಳೆಯಲು ಕಾರಣವಾಗುತ್ತದೆ. ಹೀಗೆ ಬೆಳೆದು ಹೆಮ್ಮರವಾದ ಈ ವೃಕ್ಷದ ಪ್ರಧಾನವಾದ ಕಾಂಡ ಭಾಗವೇ ಶರೀರ. ಈ ಶರೀರವನ್ನು ಆಶ್ರಯಿಸಿಯೇ ತಾನೆ ಇಡೀ ಸಂಸಾರ ನಿಂತಿರುವುದು. ಈ ಶರೀರದಲ್ಲಿ ಪ್ರಾಣವು ನರಮಂಡಲಗಳ ರೂಪದಲ್ಲಿ ಶಾಖೋಪಶಾಖವಾಗಿ ಕವಲೊಡೆದು ಶರೀರ ಕ್ರಿಯೆಗಳನ್ನು ನಿಯಂತ್ರಿಸುತ್ತಿರುವುದು. ಈ ಪ್ರಾಣವು ಇಂದ್ರಿಯಗಳೆಂಬ ತನ್ನ ಹೊರತುದಿಗಳಿಂದ ಸಂವೇದನೆಗಳನ್ನು ಸ್ವೀಕರಿಸುತ್ತಿರುವುದು. ಇಂದ್ರಿಯಗಳು ಪ್ರಾಣಕ್ರಿಯೆಯ ಒಂದಂಶ ಅಷ್ಟೆ. ಆದ್ದರಿಂದಲೇ ಇಂದ್ರಿಯಗಳನ್ನು ಪ್ರಾಣಗಳೆಂದು ಕರೆಯಲಾಗಿದೆ. ರೂಪ, ರಸಾದಿ ಇಂದ್ರಿಯ ವಿಷಯಗಳು ಬಹು ಆಕರ್ಷಕವಾಗಿರುವುದರಿಂದ ಅವುಗಳನ್ನು ಪುಷ್ಪಗಳು ಎಂದು ಕರೆಯಲಾಗಿದೆ. ಇಂದ್ರಿಯ ಸುಖವನ್ನು ಅನುಭವಿಸಲು ನಾವು ಕರ್ಮಗಳಲ್ಲಿ ತೊಡಗುತ್ತೇವೆ, ಇವು ಸಂಸ್ಕಾರಗಳನ್ನು ಉಂಟುಮಾಡುತ್ತವೆ, ಸಂಸ್ಕಾರಗಳು ಇಂದ್ರಿಯ ಸುಖಕ್ಕೆ ಪ್ರೇರಣೆಯನ್ನು ನೀಡಿ ಕರ್ಮ ಮಾಡಿಸುತ್ತವೆ, ಮತ್ತೆ ಇವುಗಳಿಂದ ಸಂಸ್ಕಾರ – ಹೀಗೆ ಕರ್ಮಬಂಧನವು ವೃದ್ಧಿಯಾಗುತ್ತ ಹೋಗುತ್ತದೆ. ಇದರ ಫಲವೇ ದುಃಖ. ಇದನ್ನು ಅನುಭವಿಸುತ್ತ ಮರದ ಮೇಲೆ ಕುಳಿತಿರುವ ಹಕ್ಕಿಯೇ ಜೀವಾತ್ಮ.

*ಕಠೋಪನಿಷತ್ತಿ*ನ ಆರನೆಯ ವಲ್ಲಿಯ ಮೊದಲನೇ ಶ್ಲೋಕದಲ್ಲಿ ಇದೇ ರೂಪಕವು ಬರುತ್ತದೆ:

**ಊರ್ಧ್ವಮೂಲಮವಾಕ್ ಶಾಖಾ ಏಷೋಽಶ್ವತ್ಥಃ ಸನಾತನಃ ।**

'ಮೂಲವು ಮೇಲಿರುವ ಶಾಖೆಗಳು ಕೆಳಗಿರುವ ಈ ಅಶ್ವತ್ಥವು ಸನಾತನವಾದುದು.' ಇದಕ್ಕೆ ಭಾಷ್ಯವನ್ನು ಬರೆಯುತ್ತ ಶ್ರೀ ಶಂಕರಾಚಾರ್ಯರು ತುಂಬ ವಿಸ್ತಾರವಾಗಿ ಈ ಸಂಸಾರವೃಕ್ಷವನ್ನು ವಿವರಿಸಿದ್ದಾರೆ. ಇದನ್ನು 'ವೃಕ್ಷ' ಎಂದು ಏಕೆ ಕರೆಯುತ್ತಾರೆ ಎಂಬುದಕ್ಕೆ ಅವರು ಹೇಳುತ್ತಾರೆ – **ವೃಕ್ಷಶ್ಚ ವ್ರಶ್ಚನಾತ್** – ಇದು ಕತ್ತರಿಸಲ್ಪಡುವುದರಿಂದ ಇದನ್ನು ವೃಕ್ಷ ಎಂದು ಕರೆಯಲಾಗಿದೆ. ಈ ವೃಕ್ಷವನ್ನು ಅಸಂಗಶಸ್ತ್ರದಿಂದ ಕತ್ತರಿಸಬೇಕೆಂದು ಶ್ರೀಕೃಷ್ಣನು ಹೇಳುತ್ತಾನೆ. ವೈರಾಗ್ಯವೆಂಬ ಕತ್ತಿಯ ಮೂಲಕ ಮುಳ್ಳು, ಪೊದೆ ಮುಂತಾದವುಗಳನ್ನು ಕತ್ತರಿಸುತ್ತ, ಈ ಗುರಿಯನ್ನು ತಲುಪಬೇಕು. ಅನಂತರ ಮತ್ತೆ ಈ ಸಂಸಾರಕ್ಕೆ ಬರಬೇಕಾಗಿಲ್ಲ.

ಈ ಗುರಿಯನ್ನು ತಲುಪಲು ಅವಶ್ಯಕವಾದ ಕೆಲವು ಗುಣಗಳನ್ನು ಶ್ರೀಕೃಷ್ಣನು ಐದನೆಯ ಶ್ಲೋಕದಲ್ಲಿ ಪ್ರಸ್ತಾಪಿಸುತ್ತಾನೆ. ಮೊದಲನೆಯ ಗುಣ ನಿರ್ಮಾನ, ಅಂದರೆ ಮಾನ್ಯತೆಯನ್ನು ಬಯಸದಿರುವುದು. ಬಾಹ್ಯ ವಿಷಯಗಳನ್ನು ತ್ಯಾಗ ಮಾಡುವುದು ಸುಲಭ. ಮಾನ್ಯತೆಯನ್ನು ತ್ಯಾಗಮಾಡುವುದು ಬಹಳ ಕಷ್ಟ – ಇದು ಅಹಂಕಾರದ ಹಸಿವು. ನಮ್ಮ ಅಹಂಕಾರವು ಇತರರ ಗೌರವವನ್ನು ಮಾನ್ಯತೆಯನ್ನೂ ಪ್ರಶಂಸೆಯನ್ನೂ ಬಯಸುತ್ತದೆ. ಯಾವುದಾದರೂ ರೀತಿಯಲ್ಲಿ ಇತರರು ನಮ್ಮನ್ನು ಗುರುತಿಸಬೇಕೆಂದು ಬಯಸುತ್ತೇವೆ. ಸರಿಮಾರ್ಗದಿಂದಾಗದಿದ್ದರೂ ದುರ್ಮಾರ್ಗದಿಂದಾದರೂ ಜನರ ಗಮನಕ್ಕೆ ಬರಬೇಕೆಂದು ಬಯಸುವವರಿದ್ದಾರೆ. **ಯೇನ ಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ** – 'ಯಾವುದೇ ರೀತಿಯಲ್ಲಾದರೂ ಪ್ರಸಿದ್ಧಿಯನ್ನು ಪಡೆ' ಎಂಬ ಮಾತಿದೆ. ಶ್ರೀಚೈತನ್ಯರ ಹಿತನುಡಿ ಇಂತಿದೆ: **ಅಮಾನಿನಾ ಮಾನದೇವ ಕೀರ್ತನೀಯಃ ಸದಾ ಹರಿಃ** – 'ತಾನು ಮಾನವನ್ನು ಬಯಸದೆ, ಇತರರಿಗೆ ಮಾನ್ಯತೆಯನ್ನು